# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com Private Circulation only

ಸಂಪುಟ : VI ಸಂಚಿಕೆ : 2 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜುಲೈ-ಸಪ್ಟೆಂಬರ್ 2020


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

ಸಂಘವು 2020-21ನೇ ಮೊದಲ ತ್ರೈಮಾಸಿಕ ಅವಧಿಗೆ ಕೊರೋನಾ ಪಿಡುಗಿನ ಸಂಕಷ್ಟದ ಪರಿಸ್ಥಿತಿಯಲ್ಲೂ ಗಣನೀಯ ಪ್ರಗತಿಯನ್ನು ಸಾಧಿಸಿತ್ತು. ಇದೀಗ 2020 ಸಪ್ಟೆಂಬರ್ 30ಕ್ಕೆ ಅಂತ್ಯವಾದ 2020-21ನೇ ಸಾಲಿನ ಅರ್ಧ ವಾರ್ಷಿಕ ಅವಧಿಯಲ್ಲಿ, ಕೊರೊನಾದ ಲಾಕ್‌ಡೌನ್‌ನ ಪರಿಣಾಮವಾಗಿ ಆರ್ಥಿಕತೆ ಹಾಗೂ ವ್ಯವಹಾರಗಳು ಮಂದಗತಿಯಲ್ಲಿದ್ದು, ಸಾಲಗಾರರಿಗೆ ಸಾಲ ಮರುಪಾವತಿಗೆ ಸರಕಾರ ನೀಡಿರುವ ಮೊರಟೋರಿಯಂ ಈ ಅವಧಿಯಲ್ಲಿ ಜ್ಯಾರಿಯಲ್ಲಿದ್ದರೂ, ಸಂಘದ ಸದಸ್ಯರು ಠೇವಣಾತಿಯನ್ನು ನೀಡಿ, ಸಾಲ ಪಡಕೊಂಡು, ಮುಖ್ಯವಾಗಿ ಸಾಲದ ಬಡ್ಡಿಯನ್ನು ಮರುಪಾವತಿ ಮಾಡಿ ಸಂಘದೊಂದಿಗೆ ಹೆಚ್ಚಿನ ವ್ಯವಹಾರದಲ್ಲಿ ತೊಡಗಿಸಿಕೊಂಡ ಫಲವಾಗಿ, ಈ ಅರ್ಧ ವಾರ್ಷಿಕ ಅವಧಿಯಲ್ಲಿ ಅತ್ಯುತ್ತಮ ಪ್ರಗತಿಯನ್ನು ಸಂಘವು ಸಾಧಿಸಿದೆ ಎಂದು ತಿಳಿಸಲು ನನಗೆ ಅತ್ಯಂತ ಸಂತೋಷವಾಗುತ್ತಿದೆ.

ಸಂಘವು ದಿನಾಂಕ 30.09.2020ಕ್ಕೆ ಸಾಧಿಸಿದ ಪ್ರಗತಿಯನ್ನು ದಿನಾಂಕ 30.09.2019ಕ್ಕೆ ಹೋಲಿಸಿದಾಗ, ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2019ಕ್ಕೆ ಇದ್ದಂತೆ | ಸಪ್ಟೆಂಬರ್ 2020ಕ್ಕೆ ಇದ್ದಂತೆ | ಹೆಚ್ಚಳ (₹) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ₹216 ಕೋಟಿ | ₹263 ಕೋಟಿ | ₹47 ಕೋಟಿ | 22% |
| 2 | ಸಾಲ ಮತ್ತು ಮುಂಗಡ | ₹177 ಕೋಟಿ | ₹223 ಕೋಟಿ | ₹46 ಕೋಟಿ | 26% |
| 3 | ಒಟ್ಟು ವ್ಯವಹಾರ | ₹393 ಕೋಟಿ | ₹486 ಕೋಟಿ | ₹93 ಕೋಟಿ | 24% |
| 4 | ನಿವ್ವಳ ಲಾಭ | ₹2.10 ಕೋಟಿ | ₹2.68 ಕೋಟಿ | ₹58 ಲಕ್ಷ | 28% |

1. ಸಂಘದ ಒಟ್ಟು ಠೇವಣಾತಿಯು ₹263 ಕೋಟಿಯಷ್ಟಿದ್ದು, 2019ರ ಸಪ್ಟೆಂಬರ್‌ಗಿಂತ ₹47 ಕೋಟಿ ಹೆಚ್ಚಳಗೊಂಡು, ಶೇ.22 ರಷ್ಟು ವೃದ್ಧಿಗೊಂಡಿರುವುದು,
2. ಹೊರಬಾಕಿ ಸಾಲವು ₹223 ಕೋಟಿಯಷ್ಟಿದ್ದು, 2019ರ ಸಪ್ಟೆಂಬರ್‌ಗಿಂತ ₹46 ಕೋಟಿ ಹೆಚ್ಚಳಗೊಂಡು ಶೇ.26ರಷ್ಟು ವೃದ್ಧಿಗೊಂಡಿರುವುದು,
3. ಒಟ್ಟು ವ್ಯವಹಾರವು ₹486 ಕೋಟಿಯುಷ್ಟಿದ್ದು, 2019ರ ಸಪ್ಟೆಂಬರ್‌ಗಿಂತ ₹93 ಕೋಟಿ ಹೆಚ್ಚಳಗೊಂಡು, ಶೇ.24ರಷ್ಟು ವೃದ್ಧಿಯಾಗಿರುವುದು,
4. ಈ ಅರ್ಧ ವಾರ್ಷಿಕ ಅವಧಿಯ ಪ್ರಗತಿಯ ಪ್ರಮುಖ ಅಂಶವೆಂದರೆ, 2020 ಮಾರ್ಚ್‌ನಿಂದ, 2020ರ ಜೂನ್‌ವರೆಗೆ ಠೇವಣಾತಿಯು ₹12 ಕೋಟಿ ಹಾಗೂ ಸಾಲವು ₹2 ಕೋಟಿ ಹೆಚ್ಚಳಗೊಂಡಿತ್ತು. ಇದು 2020ರ ಜೂನ್‌ನಿಂದ 2020ರ ಸಪ್ಟೆಂಬರ್ ತ್ರೈಮಾಸಿಕ ಅವಧಿಯಲ್ಲಿ, ಠೇವಣಾತಿಯು ₹16 ಕೋಟಿ ಮತ್ತು ಸಾಲವು ₹26 ಕೋಟಿ ಹೆಚ್ಚಳಗೊಂಡು, 2020ರ ಮಾರ್ಚ್‌ನಿಂದ 2020ರ ಸಪ್ಟೆಂಬರ್ ಠೇವಣಾತಿಯಲ್ಲಿ ₹28 ಕೋಟಿ ಮತ್ತು ಸಾಲದಲ್ಲಿ ₹28 ಕೋಟಿ ಹೀಗೆ ಒಟ್ಟು ವ್ಯವಹಾರವು 2020-21ನೇ ಸಾಲಿನ ಅರ್ಧ ವಾರ್ಷಿಕದಲ್ಲಿ ₹56 ಕೋಟಿ ಹೆಚ್ಚಳಗೊಂಡಿದೆ.
5. 2020-21ನೇ ಸಾಲಿನ ಈ ಅರ್ಧವಾರ್ಷಿಕ ಅವಧಿಯಲ್ಲಿನ ಸಂಘದ ಬಡ್ಡಿ ಸಂಗ್ರಹಣೆ ಗಮನಿಸಿದಾಗ, ₹11.80 ಕೋಟಿ ಬಡ್ಡಿ ಆದಾಯ ಬಂದಿದ್ದು, ಇದು ಹಿಂದಿನ ಸಾಲಿನ ಇದೇ ಅವಧಿಯಲ್ಲಿ ₹9.88 ಕೋಟಿಗಿಂತ

₹1.92 ಕೋಟಿ ಹೆಚ್ಚಳಗೊಂಡು Moratorium ಅವಧಿಯು ಜ್ಯಾರಿಯಲ್ಲಿದ್ದರೂ, ಸಂಘದ ಸಾಲಗಾರ ಸದಸ್ಯರು ಬಡ್ಡಿ ಪಾವತಿಯನ್ನು ಕ್ಲಪ್ತವಾಗಿ ಪಾವತಿ ಮಾಡುತ್ತಾ ಬಂದಿರುವುದರಿಂದ ಈ ಪ್ರಗತಿಯನ್ನು ಕಾಣಲು ಸಾಧ್ಯವಾಗಿರುತ್ತದೆ.

6. 30.09.2019ಕ್ಕೆ ಸಂಘವು ₹2.10 ಕೋಟಿ ನಿವ್ವಳ ಲಾಭ ಗಳಿಸಿದ್ದು, 30.09.2020ಕ್ಕೆ ನಿವ್ವಳ ಲಾಭವು ₹2.68 ಕೋಟಿಯಾಗಿ, ಈ ಅವಧಿಯಲ್ಲಿ ಲಾಭವು ₹58 ಲಕ್ಷ ಹೆಚ್ಚಳವಾಗಿ ಶೇ.28 ವೃದ್ಧಿಯಾಗಿರುವುದು.

ಸಂಘದ ಸದಸ್ಯ ಠೇವಣಿದಾರರು ತೋರಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ, ಈ ಅಸಾಮಾನ್ಯ ಸಂಕಷ್ಟದ ದಿನಗಳಲ್ಲೂ, ಸಂಘದ ವ್ಯವಹಾರ ಅತ್ಯುತ್ತಮವಾಗಿ ವೃದ್ಧಿಯಾಗಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಯಾವುದೇ ಸಂಕಷ್ಟದ ಸಮಯದಲ್ಲೂ ಅದನ್ನು ಎದುರಿಸಿಕೊಂಡು, ಜೀವನ ನಡೆಸುವ ಶಕ್ತಿ ನಮ್ಮ ನಾಡಿನ ಜನತೆಗಿದೆ. ಆರೋಗ್ಯ, ಶುಚಿತ್ವ, ರೋಗದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿ, ಸುಧಾರಿತ ಜೀವನ ಕ್ರಮದೊಂದಿಗೆ ಅದೇ ಜೀವನೋತ್ಸಾಹದಿಂದ ಕೊರೋನಾ ರೋಗವನ್ನು ಹಿಮ್ಮೆಟ್ಟಿಸಿ, ಜನಜೀವನ ಮತ್ತು ವ್ಯವಹಾರಗಳು ಸಹಜತೆಗೆ ಮರಳಿ ಬರಲಿ ಎಂದು ಆಶಿಸುತ್ತೇನೆ. ಮುಂದಿನ ದಿನಗಳಲ್ಲೂ ಕೂಡ ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ, ಸಂಘವನ್ನು ಇನ್ನಷ್ಟು ಪ್ರಗತಿ ಮತ್ತು ಸದೃಢತೆಯತ್ತ ಮುನ್ನಡೆಸಲು ಸಾಧ್ಯವಾಗುವುದೆಂದು ಭರವಸೆಯನ್ನು ವ್ಯಕ್ತಪಡಿಸುತ್ತೇನೆ.

**ಕೆ. ಜೈರಾಜ್ ಬಿ. ರೈ**
ಅಧ್ಯಕ್ಷರು

## ಕೋವಿಡ್–19 ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯಿಂದ ನೆರವು

### ರಾಮಕೃಷ್ಣ ಸುದ್ದಿ ಸಂಚಯ ಎಪ್ರಿಲ್–ಜೂನ್ 2020ರ ಸಂಚಿಕೆಯಲ್ಲಿ ತಿಳಿಸಿದಂತೆ

I) ಸಂಘದ ವತಿಯಿಂದ ₹2 ಲಕ್ಷ ಮುಖ್ಯಮಂತ್ರಿ ಪರಿಹಾರ ನಿಧಿ ಕೋವಿಡ್–19ಗೆ ದೇಣಿಗೆ.

II) ಸಂಘದ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವತಿಯಿಂದ ₹1.50 ಲಕ್ಷ "ಮುಖ್ಯಮಂತ್ರಿ ಪರಿಹಾರ ನಿಧಿ ಕೋವಿಡ್–19"ಗೆ ದೇಣಿಗೆ.

III) ಸಂಘದ 20 ಶಾಖೆಗಳು ಮತ್ತು ಕೇಂದ್ರ ಕಛೇರಿಯಿಂದ, ಫಲಾನುಭವಿಗಳಿಗೆ 210 ಆಹಾರ ಸಾಮಾಗ್ರಿಗಳ ಕಿಟ್‌ಗಳ ವಿತರಣೆ.

IV) ₹1.15 ಲಕ್ಷ ಸಂಘದ ಶ್ರೀ ರಾಮಕೃಷ್ಣ ನಿತ್ಯ ನಿಧಿ ಸಂಗ್ರಾಹಕರು ಮತ್ತು ಚಿನ್ನಾಭರಣ ಸರಾಫರರು ಇವರಿಗೆ ಧನ ಸಹಾಯ.

**ಹಾಗೂ**

**ಇವುಗಳಲ್ಲದೆ,**

V) **ಕೋವಿಡ್–19 ಲಾಕ್‌ಡೌನ್‌ನ ಸಂಕಷ್ಟದ ಅವಧಿಯಲ್ಲಿ, ಸಂಘದ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಸಂಘದ ಆಡಳಿತ ಮಂಡಳಿಯು, ಸಿಬ್ಬಂದಿಗಳಿಗೆ ಪ್ರಯಾಣ ವೆಚ್ಚದ ಬಾಬ್ತು ₹ 1.5 ಲಕ್ಷ ಮೊಬಲಗನ್ನು ನೀಡಲಾಗಿದೆ.**

## ಅಭಿನಂದನೆಗಳು

❖ ಮಂಗಳೂರಿನ ಪ್ರತಿಷ್ಠಿತ ಕಂಪನಿಯಾದ ಮೆ. ಮಂಗಳೂರು ಥಿಯೇಟರ್ಸ್ ಲಿ.ನ ನಿರ್ದೇಶಕರಾಗಿ ಆಯ್ಕೆಯಾಗಿರುವ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ,

ಮತ್ತು

❖ ಪುತ್ತೂರು ತಾಲೂಕು ರಬ್ಬರ್ ಬೆಳೆಗಾರರ ಮಾರಾಟ ಹಾಗೂ ಸಂಸ್ಕರಣಾ ಸಹಕಾರ ಸಂಘಕ್ಕೆ ನಿರ್ದೇಶಕರಾಗಿ ಆಯ್ಕೆಯಾದ ಸಂಘದ ನಿರ್ದೇಶಕರಾದ ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರಿಗೆ,

**ಅಭಿನಂದನೆಗಳು.**

❖ ಸಂಘದ ವಿಟ್ಲ ಶಾಖೆಯ ಸಿಬ್ಬಂದಿ ಶ್ರೀಮತಿ ಫ್ಲಾವಿಯಾ ಜೇನ್ ಪಿಂಟೋರವರು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು

## 2020ನೇ ಸಾಲಿನಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ತೋರಿದ ಸಂಘದ ಸಿಬ್ಬಂದಿಗಳ ಮಕ್ಕಳಿಗೆ ಅಭಿನಂದನೆಗಳು



ಸಂಘದ ಹೆಬ್ರಿ ಶಾಖೆಯಲ್ಲಿ ವ್ಯವಸ್ಥಾಪಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಘವೇಂದ್ರ ರಾವ್ ಇವರ ಮಗಳಾದ ಕು. ಮಾನಸರಾವ್ ಇವರು ಪಿ.ಯು.ಸಿ. (Science) ಪರೀಕ್ಷೆಯಲ್ಲಿ ಶೇ.96.50 ಪಡೆದಿರುತ್ತಾರೆ. ಇವರು ಜ್ಞಾನಸುಧಾ ಜೂನಿಯರ್ ಕಾಲೇಜು, ಕಾರ್ಕಳ ಕಾಲೇಜಿನ ವಿದ್ಯಾರ್ಥಿನಿ.



ಸಂಘದ ಮೂಡಬಿದ್ರಿ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ನಿರ್ಮಲಾ ಪಿ. ಶೆಟ್ಟಿ ಇವರ ಮಗ ಮಾಸ್ಟರ್ ಜೋಷಿತ್ ಪಿ. ಶೆಟ್ಟಿ ಇವರು ಪಿಯುಸಿ (Commerce) ಪರೀಕ್ಷೆಯಲ್ಲಿ ಶೇ.88.33 ಪಡೆದಿರುತ್ತಾರೆ. ಇವರು ರೋಟರಿ ಜೂನಿಯರ್ ಕಾಲೇಜು ಮೂಡಬಿದ್ರಿ ಕಾಲೇಜಿನ ವಿದ್ಯಾರ್ಥಿ.




ಸಂಘದ ಉಪ್ಪಿನಂಗಡಿ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀ ಶ್ರೀಹರ್ಷ ಡಿ.ಎಸ್. ಇವರ ಮಗ ಮಾಸ್ಟರ್ ವಿಖ್ಯಾತ್ ಇವರು ಪಿಯುಸಿ (Science) ಪರೀಕ್ಷೆಯಲ್ಲಿ ಶೇ.88 ಪಡೆದಿರುತ್ತಾರೆ. ಇವರು ಅಂಬಿಕಾ ಜೂನಿಯರ್ ಕಾಲೇಜು ಪುತ್ತೂರು ಕಾಲೇಜಿನ ವಿದ್ಯಾರ್ಥಿ.

## ಹುಟ್ಟು ಹಬ್ಬದ ಶುಭಾಶಯಗಳು

ಅಕ್ಟೋಬರ್ 2020ರಿಂದ, ಡಿಸೆಂಬರ್ 2020ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು

| ಸಿಬ್ಬಂದಿ ಹೆಸರು | ಶಾಖೆ | ಸಿಬ್ಬಂದಿ ಹೆಸರು | ಶಾಖೆ |
|---|---|---|---|
| ಶ್ರೀಮತಿ ಯಶೋಧ ನ್ಯಾಕ್ | ಉಡುಪಿ | ಶ್ರೀ ರಕ್ಷಿತ್ ಆರ್. ಶೆಟ್ಟಿ | ತೊಕ್ಕೊಟ್ಟು |
| ಶ್ರೀ ಅಣ್ಣಪ್ಪ ಶೆಟ್ಟಿ | ಉಡುಪಿ | ಶ್ರೀಮತಿ ಸೌಮ್ಯರಾಣಿ | ವೆಲೆನ್ಸಿಯಾ |
| ಶ್ರೀಮತಿ ಸವಿತಾ ಪೂಂಜಾ | ಚಿಲಿಂಬಿ | ಶ್ರೀ ಧನಂಜಯ ಕುಮಾರ್ | ಸುರತ್ಕಲ್ |
| ಶ್ರೀ ಸಂತೋಷ್ | ಕುಂದಾಪುರ | ಶ್ರೀ ಶಮಂತ್ ಟಿ. ರೈ | ಕೇಂದ್ರ ಕಛೇರಿ |
| ಶ್ರೀಮತಿ ನಂದಿತಾ ಆಚಾರ್ಯ | ವೆಲೆನ್ಸಿಯಾ | ಕು. ಸುಶ್ಮಿತ | ಉಡುಪಿ |
| ಕು. ಪೂರ್ಣಿಮ | ಹೆಬ್ರಿ | ಕು. ಕೌಸ್ತುಭ ಶೆಟ್ಟಿ | ಮುಲ್ಕಿ |

## ಶ್ರದ್ಧಾಂಜಲಿ



ದಿ| ಜಗನ್ನಾಥ ಶೆಟ್ಟಿ

ದಿನಾಂಕ 04.08.2020ರಂದು ನಿಧನರಾದ ಸಂಘದ ಬೈಂದೂರು ಶಾಖೆಯ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾದ ಶ್ರೀ ಬಿ. ಜಗನ್ನಾಥ ಶೆಟ್ಟಿಯವರ ನಿಧನಕ್ಕೆ ದಿನಾಂಕ 29.08.2020ರಂದು ಜರಗಿದ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ನಿರ್ದೇಶಕರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದರು. ಶ್ರೀ ಬಿ. ಜಗನ್ನಾಥ ಶೆಟ್ಟಿಯವರು ಸಂಘದ ಬೈಂದೂರು ಶಾಖೆಯ ಆರಂಭದಿಂದ, 23 ವರ್ಷಗಳ ಕಾಲ ಶಾಖೆಯ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು, ಶಾಖೆಯ ಶ್ರೇಯೋಭಿವೃದ್ಧಿಗೆ, ಬೆಳವಣಿಗೆಗೆ ನೀಡಿರುವ ಸೇವೆ ಹಾಗೂ ಅಪಾರ ಕೊಡುಗೆಯನ್ನು ಸ್ಮರಿಸಿ, ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಿ, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

- ಶ್ರೀ ನರಸಿಂಹ ಶೆಟ್ಟಿ (ಬೈಂದೂರು ಶಾಖೆಯ ಶಾಖಾಧಿಕಾರಿ ಶ್ರೀಮತಿ ಶ್ರೀಲತಾ ಶೆಟ್ಟಿಯವರ ತಂದೆ).
- ಶ್ರೀಮತಿ ಕಮಲ (ವಿಟ್ಲ ಶಾಖೆಯ ಸಿಬ್ಬಂದಿಯಾದ ಶ್ರೀ ಹರೀಶ್ ಮೂಲ್ಯರವರ ತಾಯಿ)ರವರ

ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು. ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಭಾವಪೂರ್ಣ ಶ್ರದ್ಧಾಂಜಲಿ.

# ಕವನಗಳು

## ವೃಕ್ಷಮಾತೆ





ರಚನೆ : ಅಶ್ವಿತಾ ಎಂ.
ಕೇಂದ್ರ ಕಛೇರಿ ಸಿಬ್ಬಂದಿ

ಹಸಿರಲುಸಿರು ನೀಡುವ ವೃಕ್ಷಮಾತೆಯೇ
ಜೀವಸಂಕುಲದ ಜೀವನಾಡಿ ನೀನು
ನಿರ್ಜಲ ನೆಲಕೆ ಜೀವಕೊಟ್ಟು ಜನನಿಯಾದೆ,
ಮಳೆಗೆ ಮೂಲವಾಗಿ, ಇಳೆಗೆ ಸ್ಫೂರ್ತಿಯಾಗಿ, ನವಸೆಲೆ ನೀನಾದೆ !

ಉಸಿರ ಜ್ಯೋತಿಗೆ ಮಳೆಹನಿಯ ತೈಲವೆರೆದು
ತನುಶುದ್ಧಿ; ಮನಶುದ್ಧಿ; ಇಳೆಶುದ್ಧಿ ಮಾಡಿದೆ !
ಧರೆಯಾಗು ಹೋಗುಗಳ ನಿಯಂತ್ರಕಳು ನೀನು
ಕಟಕಟನೆ ಕಡಿವಾಗ ಸುಮ್ಮನಿರುವುದೇನು .. ?
ಯಾಕಿಂಥ ಮೌನ ಹೇಳಮ್ಮ ನೀನು..

ಭೂದೇವಿ ಮಡಿಲಿಗೆ ತ್ಯಾಜ್ಯದ ಮಹಾಮಜ್ಜನ !!
ಎಲ್ಲೆಡೆ ಹಾಹಾಕಾರ ತರತರದ ರೋಗರುಜಿನ !!
ಮಳೆಯಿಲ್ಲ, ಬೆಳೆಯಿಲ್ಲ, ಇಳೆಯಲ್ಲಿ, ಜಲವಿಲ್ಲ
ಸುಡು ಬಿಸಿಲಿನಾಸರೆಗೆ ಒಂದಿನಿತೂ ನೆರಳಿಲ್ಲ !

ಕಾಂಚಾಣದಾಸೆಯಲಿ ಕುರುಡಾಗಿಹ ಮನುಜ
ಕಾಡೋಡಲು ಬರಿದಾಗಿ ತುಂಬಿತಾತನ ಕಣಜ !!
ಮೊಳಗಲಿ ಮೊಳಗಲಿ ಈ ಜಗದಲಿ ವಿಶ್ವನಾಶದ ರಣಕಹಳೆ !!
ಅದನಾಲಿಸಿಯಾದರೂ ಹಸಿರಾಗಲಿ ಮತ್ತೊಮ್ಮೆ ಈ ಇಳೆ !



## ಅವಳು ನನ್ನ ಅಮ್ಮ..



ರಚನೆ : ಧನಂಜಯ್ ಕುಮಾರ್
ಸುರತ್ಕಲ್ ಶಾಖಾ ಸಿಬ್ಬಂದಿ

ನೋವನುಂಡಳು, ಜನ್ಮವಿತ್ತಳು,
ಸಾಲದಷ್ಟು ಪ್ರೀತಿ ಕೊಟ್ಟಳು,
ಇಟ್ಟ ಹೆಜ್ಜೆಯು ತಪ್ಪದಂತೆ ಗಮನ ಕೊಟ್ಟಳು,
ಅವಳು ನನ್ನ ಅಮ್ಮ..

ಕೈಯ ಹಿಡಿದಳು, ನಡೆಯ ಕಲಿಸಿದಳು,
ಬೀಳದಂತೆ ಎತ್ತಿ ಹಿಡಿದಳು,
ಗಾಯಗೊಂಡು ಅಳುವ ವೇಳೆ ತಾನು ಅತ್ತಳು,
ಅವಳು ನನ್ನ ಅಮ್ಮ..

ಕಟ್ಟ ಪಟ್ಟಳು, ವಿದ್ಯೆ ಕೊಟ್ಟಳು,
ಸಿಕ್ಕ ತಿಂಡಿಯ ಕಟ್ಟಿ ತಂದಳು,
ತಾನು ತಿನ್ನದೆ ಕೇಳಿದನ್ನು ತಂದು ಇಟ್ಟಳು,
ಅವಳು ನನ್ನ ಅಮ್ಮ..

ಚಿನ್ನ ಹಾಕಲಿಲ್ಲ, ಬಟ್ಟೆ ಕೊಳ್ಳಲಿಲ್ಲ,
ಮಕ್ಕಳ ಬದುಕಿಗೆ ಮೀಸಲಿಟ್ಟಳು,
ನಗುವ ಬಯಸುತ ತನ್ನ ನೋವನು ನುಂಗಿ ಕೊಂಡಳು,
ಅವಳು ನನ್ನ ಅಮ್ಮ..

ಬೆನ್ನು ಬಾಗಿತು, ಜೀವ ಸವೆಯಿತು,
ನೆಲೆಯ ಕೊಟ್ಟು ಪ್ರಾಣ ಬಿಟ್ಟಳು,
ತಾನು ಸತ್ತರೂ ತಾಯಿ ಪ್ರೀತಿಯ ಬದುಕಿಸಿ ಬಿಟ್ಟಳು,
ಅವಳು ನನ್ನ ಅಮ್ಮ..

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.